**ಸಾಕ್ಷಿಯನ್ನು ದಿನಾಂಕಃ16.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಹೆಚ್ ಎಂ ವಕೀಲರಿಂದಃ**

4. ನಾನು ನನ್ನ ಹಿಂದಿನ ದಿನಾಂಕದ ವಿಚಾರಣೆಯಲ್ಲಿ ನನ್ನ ಅತ್ತೆ ಬೆಕ್ಕಳಲೆ ಯವರು ಎಂದು ಹೇಳಿದ್ದು, ಅವರು ಬೆಕ್ಕಳಲೆಯವರು ಅಲ್ಲ, ಒಂದೇ ಊರಿನವರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ತಾನು ಹೇಳಿಕೆ ಕೊಡುವಾಗ ಗೊಂದಲದಲ್ಲಿ ಆ ರೀತಿ ಹೇಳಿಕೆ ಕೊಟ್ಟಿರುವುದಾಗಿ ನುಡಿದಿರುತ್ತಾರೆ. ಅವರ ಅಣ್ಣ ತಮ್ಮಂದಿರು ಬದುಕಿದ್ದಾರೆ ಎಂದರೆ ಇಬ್ಬರು ಅಣ್ಣಂದಿರುವ ಮೃತ ಪಟ್ಟಿದ್ದಾರೆ ಉಳಿದವರ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ನನ್ನ ಅತ್ತೆಯ ಸಹೋದರ ಕರೀಗೌಡ ಎನ್ನುವವರು ಬದುಕಿದ್ದಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂಬರ್ 1 ರಿಂದ 8 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರಿದು ವಿಭಾಗ ಪತ್ರದ ಮೂಲಕ ಬಂದಿದೆ ಎಂದು ನುಡಿದಿರುತ್ತಾರೆ. ಆ ಬಗ್ಗೆ ವಿಭಾಗ ಪತ್ರವನ್ನು ನೋಡಿಲ್ಲ. ಸಾಕ್ಷಿಯು ಮುಂದುವರಿದು ಎಂ ಆರ್ ನಲ್ಲಿ ತನ್ನ ಮಾವ ಮತ್ತು ಅವರ ತಮ್ಮನ ನಡುವೆ ವಿಭಾಗ ಆಗಿರುವುದಾಗಿ ನಮೂದು ಇದೆ ಎಂದು ನುಡಿದಿರುತ್ತಾರೆ. ಆ ಎಂ ಆರ್ ಅನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ದಾವಾ ಷೆಡ್ಯೂಲ್ ಐಟಂ ನಂಬರ್ 2 ರಿಂದ 8 ರ ಆಸ್ತಿಗಳು ಖುಷ್ಕಿ ಜಮೀನುಗಳು ಎಂದರೆ, ಸರ್ವೆ ನಂಬರ 223 ರಲ್ಲಿ ತೆಂಗಿನ ತೋಟ ಇದೆ, ಉಳಿದದ್ದು ಖುಷ್ಕಿ ಜಮೀನು. ಸರ್ವೆ ನಂಬರ್ 223 ರಲ್ಲಿ ತೆಂಗಿನ ತೋಟ ಇಲ್ಲ, ಅದು ಖುಷ್ಕಿ ಜಮೀನು ಎಂದರೆ, ದಾವಾ ಐಟಂ

ನಂಬರ್ 2 ರಿಂದ 8 ರ ಆಸ್ತಿಗಳ ಪೈಕಿ ಒಂದು ಆಸ್ತಿಯಲ್ಲಿ ತೆಂಗಿನ ತೋಟ ಇದ್ದು, ಅದರ ಸರ್ವೆನಂಬರ್ ನಿಖರವಾಗಿ ಹೇಳಲು ಗೊಂದಲ ಇದೆ . ಆ ತೆಂಗಿನ ತೋಟ ಇರುವ ಜಮೀನಿನ ಚಕ್ಕುಬಂದಿ ಉತ್ತರಕ್ಕೆ – ಓಡಾಡುವ ಕಾಲು ದಾರಿ, ದಕ್ಷಿಣಕ್ಕೆ – ಕಾಲುವೆ, ಪೂರ್ವಕ್ಕೆ – ನನ್ನ ಮಾವನ ತಮ್ಮನ ತೆಂಗಿನ ತೋಟ ಹಾಗೂ ಪಶ್ಚಿಮಕ್ಕೆ – ಬೇರೆಯವರ ಜಮೀನು ಇರುತ್ತದೆ. ನಾನು ಈಗ ಹೇಳಿರುವ ಚಕ್ಕುಬಂದಿಯನ್ನು ದಾವಾ ಷೆಡ್ಯೂಲ್ ಐಟಂ ನಂಬರ್ 2 ರಿಂದ 8 ರ ಆಸ್ತಿಗಳಲ್ಲಿ ಯಾವ ಆಸ್ತಿಗಾದರೂ ಬರೆಯಲಾಗಿದೆಯೇ ಎಂದರೆ, ಸರ್ವೆ ನಂಬರ್ ಗಳ ವಿವರ ಕೊಟ್ಟರೆ ಸಾಕು ಎಂದು ಹೇಳಿದ್ದರಿಂದ ಅಷ್ಟು ವಿವರ ಕೊಟ್ಟಿದ್ದೇನೆ. ನಾನು ಮೇಲೆ ಹೇಳಿದ ತೆಂಗಿನ ತೋಟದ ಚಕ್ಕುಬಂದಿಯ ಸರ್ವೆ ನಂಬರ್ ಗಳನ್ನು ಈಗ ಹೇಳಲು ಆಗುವುದಿಲ್ಲ, ನಕಾಶೆ ನೋಡಿ ಹೇಳಬಹುದು. ನಾನು ಎಲ್ಲಾ ಆಸ್ತಿಗಳ ಚಕ್ಕುಬಂದಿಯ ಸರ್ವೆ ನಂಬರ್ ಗಳನ್ನು ನಾನು ಸರ್ವೆಯರ್ ಆಗಿರುವುದರಿಂದ ಊಹೆಯ ಮೇಲೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಕಾಶೆ ನೋಡಿ ಹಾಕಿರುವುದಾಗಿ ನುಡಿದಿರುತ್ತಾರೆ. ದಾವಾ ಷೆಡ್ಯೂಲ್ 2 ರಿಂದ 8 ರ ಆಸ್ತಿಗಳಲ್ಲಿ ಮಳೆ ಬಂದರೆ ಹುರುಳಿ ಬೆಳೆ ಬಿಟ್ಟರೆ ಬೇರೆ ಯಾವುದೇ ಬೆಳೆ ಬೆಳೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಷೆಡ್ಯೂಲ್ ಐಟಂ ನಂಬರ್ 1 ರ ಆಸ್ತಿ ವಿಶ್ವೇಶ್ವರಯ್ಯ ನಾಲೆಯ ಕೊನೆಯ ಭಾಗದಲ್ಲಿ ಇದೆ ಎಂದರೆ ಸರಿ. ಆದ್ದರಿಂದ ಅದಕ್ಕೆ ನೀರು ಸರಿಯಾಗಿ ಸರಬರಾಜು

ಆಗುವುದಿಲ್ಲ ಎಂದರೆ ಬೋರ್ ವೆಲ್ ಇದೆ. ಅದರಲ್ಲಿ ಬೋರ್ ವೆಲ್ ಇಲ್ಲ, ನೀರು ಸರಬರಾಜು ಸರಿಯಾಗಿ ಇಲ್ಲದಿರುವುದರಿಂದ, ಅದರಲ್ಲಿ ಭತ್ತದ ಬೆಳೆ ಹಾಕಿದಾರೆ ಹಲವಾರು ಬಾರಿ ಒಣಗಿ ಹೋಗುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಆ ಆಸ್ತಿಯಿಂದ ಕುಟುಂಬಕ್ಕೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಆಸ್ತಿಯ 1 ಎಕರೆ ವಿಸ್ತೀರ್ಣಕ್ಕೆ ತಾನು ಮದುವೆಯಾದ ನಂತರ ತೆಂಗಿನ ಮರ ಮತ್ತು ಗಂಧದ ಮರಗಳನ್ನು ಹಾಕಿಸಿರುವುದಾಗಿ ನುಡಿದಿರುತ್ತಾರೆ. ಆ ರೀತಿ ಮರಗಳನ್ನು ಹಾಕಿಸಿದ್ದು 2018 ರಲ್ಲಿ. ತೆಂಗಿನ ಮರಗಳು ಫಲ ಕೊಡಲು 6 ರಿಂದ 7 ವರ್ಷ ಬೇಕು. ದಾವಾ ಐಟಂ ನಂಬರ್ 2 ರಿಂದ 8 ರಲ್ಲಿ ಯಾವುದೇ ಆದಾಯ ಬರುವುದಿಲ್ಲ ಎಂದರೆ, ಸದರಿ ಆಸ್ತಿಗಳ ಪೈಕಿ 38 ವರೆ ಗುಂಟೆ ಜಮೀನಿನಲ್ಲಿ ನೀಲಗಿರಿ ಮರ ಹಾಕಿಸಿದ್ದು, ಈಗ ಅದನ್ನು ಕಟಾವು ಮಾಡಿಸಿದ್ದಾರೆ. ನೀಲಗಿರಿ ಮರಗಳು ತುಂಬಾ ವರ್ಷಗಳಿಂದ ಇವೆ. ದಾವಾ ಷೆಡ್ಯೂಲ್ ಐಟಂ ನಂಬರ್ 2 ರಿಂದ 8 ರ ಆಸ್ತಿಗಳಲ್ಲಿ ಯಾವುದೇ ಬೆಳೆ ಮತ್ತು ಮರಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 1 ರಿಂದ 8 ರ ಆಸ್ತಿಗಳಿಂದ ನನ್ನ ಮಾವನವರ ಕುಟುಂಬಕ್ಕೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅವರ ಕುಟುಂಬ ನಿರ್ವಹಣೆಗೆ ತೊಂದರೆ ಯಾಗಿದ್ದರಿಂದ 1 ನೇ ಪ್ರತಿವಾದಿ ಸುಮಾರು 30 ವರ್ಷಗಳಿಂದ ಭತ್ತ ಮತ್ತು ತೆಂಗಿನ ಕಾಯಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

6. ನನ್ನ ತಾಯಿಯ ಮನೆ ಮಂಡ್ಯ ತಾಲ್ಲೂಕು ಬೇವಿನ ಹಳ್ಳಿ ಗ್ರಾಮ. ನಮ್ಮ ಗ್ರಾಮಕ್ಕೆ ಮತ್ತು ಗಟ್ಟಹಳ್ಳಿ ಗ್ರಾಮಕ್ಕೆ ಸುಮಾರು 35 ಕಿ ಮೀ ಅಂತರ ಇದೆ ಎಂದರೆ ಸರಿ. ನನ್ನ ಮದುವೆಯಾಗುವ ಮುಂಚೆ ನನ್ನ ಮಾವನವರ ಕುಟುಂಬದಲ್ಲಿ ನಡೆದ ವ್ಯವಹಾರಗಳು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನನ್ನ ಗಂಡನ ಜನ್ಮ ವರ್ಷ 1980 ಎಂದರೆ ಸರಿ. ನನ್ನ ಮದುವೆಯಾಗು ಮುಂಚೆ ನನ್ನ ಮಾವನವರ ಕುಟುಂಬದ ಆದಾಯ ಮತ್ತು ಖರ್ಚಿನ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂಬರ್ 9 ರ ಆಸ್ತಿಯನ್ನು ದಿಃ01.06.1971 ರಲ್ಲಿ 38 ಗುಂಟೆ ಮತ್ತು ದಿಃ 07.05.2002 ರಲ್ಲಿ 13 ವರೆ ಗುಂಟೆ ಜಮೀನನ್ನು ನನ್ನ ಮಾವ ಖರೀದಿಸಿದ್ದಾರೆ ಎಂದರೆ ವಿಭಾಗದ ಮುಂಚೆ ಖರೀದಿಸಿದ್ದು, ವಿಭಾಗ ಪತ್ರದಲ್ಲಿ ಅವರಿಗೆ ಬಂದಿದೆ. ವಿಭಾಗವು 1978 ರಲ್ಲಿ ಆಗಿರಬಹುದು. ಅದಕ್ಕೆ ಯಾವ ದಾಖಲೆ ಇದೆ ಎಂದರೆ ಎಂ ಆರ್ ನಲ್ಲಿ ನಮೂದು ಇದೆ. ಆ ಆಸ್ತಿ ವಿಭಾಗದಲ್ಲಿ ಬಂದಿದ್ದಲ್ಲ, ನನ್ನ ಮಾವ ಅದನ್ನು ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 10 ರ ಆಸ್ತಿಯನ್ನು ನನ್ನ ಮಾವ ದಿಃ 12.07.1968 ರಲ್ಲಿ ಖರೀದಿಸಿದ್ದಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂಬರ್ 9 ಮತ್ತು 10 ರ ಆಸ್ತಿಗಳನ್ನು ನನ್ನ ಮಾವ ತೆಂಗಿನ ಕಾಯಿ ಮತ್ತು ಭತ್ತದ ವ್ಯಾಪಾರ ಮಾಡಿ ಬಂದ ಸಂಪಾದನೆಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅವೆರಡೂ ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆ ಆಸ್ತಿಗಳ ಮೇಲೆ ನನ್ನ ಮಾವನವರನ್ನು

ಹೊರತು ಪಡಿಸಿ ಬೇರೆಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 7 ರ ಆಸ್ತಿಯನ್ನು ದಿಃ 31.05.1981 ರಲ್ಲಿ ನನ್ನ ಮಾವ ಖರೀದಿಸಿದ್ದಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ, ಅದು ವಿಭಾಗ ಪತ್ರದಲ್ಲಿ ಇದೆ. ಆ ಆಸ್ತಿಯನ್ನು ಸಹ ನನ್ನ ಮಾವ ತೆಂಗಿನ ಕಾಯಿ ಮತ್ತು ಭತ್ತದ ವ್ಯಾಪಾರ ಮಾಡಿ ಬಂದ ಸಂಪಾದನೆಯಿಂದ ಖರೀದಿಸಿದ್ದಾರೆ ಎಂದರೆ , ಒಟ್ಟು ಕುಟುಂಬದಲ್ಲಿ ಖರೀದಿಸಿದ್ದಾರೆ. ಅದರಲ್ಲಿ ಸಹ ನನ್ನ ಮಾವನವರನ್ನು ಹೊರತು ಪಡಿಸಿ ಬೇರೆಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಆಸ್ತಿಗಳಲ್ಲಿ ಸಾಧ್ಯವಾದರೆ ಭಾಗ ತೆಗೆದುಕೊಳ್ಳಬೇಕೆಂದು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

7. ದಾವಾ ಷೆಡ್ಯೂಲ್ ಐಟಂ ನಂಬರ್ 11 ರ ಆಸ್ತಿಯನ್ನು ನನ್ನ ಮಾವ ಅವರ ಸ್ವಂತ ದುಡಿಮೆ ಯಿಂದ ಖರೀದಿಸಿ ಅವರ ಹೆಂಡತಿಯ ಹೆಸರಿಗೆ ಕ್ರಯ ಮಾಡಿಸಿದ್ದರು ಎಂದರೆ ನನ್ನ ಗಂಡ ದಾವಾ ಐಟಂ ನಂಬರ್ 11 ಮತ್ತು 13 ರ ಆಸ್ತಿಯನ್ನು ನನ್ನ ಅತ್ತೆಗೆ ಅವರ ತಾಯಿ ಮನೆಯಿಂದ ಕೊಟ್ಟಿದ್ದರು ಎಂದು ಹೇಳಿದ್ದರು. ಆ ಎರಡೂ ಆಸ್ತಿಗಳು ನನ್ನ ಮಾವನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಆ ಆಸ್ತಿಗಳಲ್ಲಿಯೂ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಮಾವನವರನ್ನು ಈಗ 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ, ನಾವು ಇರುವ ವರೆಗೂ ನಾವು ನೋಡಿಕೊಳ್ಳುತ್ತಿದ್ದೆವು, ಈಗ 2 ನೇ ಪ್ರತಿವಾದಿ 3 ದಿನ ನೋಡಿಕೊಳ್ಳುತ್ತಾರೆ , ಉಳಿದ ದಿನ ಬೆಂಗಳೂರಿನಲ್ಲಿ ಕೆಲಸಕ್ಕೆ

ಹೋಗುತ್ತಾರೆ. 2 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸ ಇಲ್ಲ ಮತ್ತು ಕೆಲಸದಲ್ಲಿ ಇಲ್ಲ, ಅವರು ಊರಿನಲ್ಲಿಯೇ ಇದ್ದುಕೊಂಡು ತಂದೆಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಊರಿಗೆ ಹೋಗಿ 2 ತಿಂಗಳು ಆಗಿದೆ. ನಾನು 3–4 ತಿಂಗಳ ಹಿಂದೆ ಊರಿಗೆ ಹೋದಾಗ ಅವರ ಮನೆಗೆ ಹೋಗಿದ್ದೆ. ನನ್ನ ಮಾವನವರು ಆಗ ಊರಿನಲ್ಲಿ ಇದ್ದರು, 2 ನೇ ಪ್ರತಿವಾದಿ ಇರಲಿಲ್ಲ, ಅವರಿಗೆ ನಾನು ಫೋನ್ ಮಾಡಿದಾಗ ಅವರು ಬೆಂಗಳೂರಿನಲ್ಲಿ ಇರುವುದಾಗಿ ಹೇಳಿದ್ದರು. ನಾನು ಅವರ ಊರಿಗೆ ಹೋಗಿ 6 ವರ್ಷಗಳಾಗಿವೆ ಎಂದರೆ ಸರಿಯಲ್ಲ. 6 ವರ್ಷಗಳಿಂದ ನನಗೆ ಮತ್ತು ಅವರಿಗೆ ಮಾತುಕತೆ ಇಲ್ಲ, ಅವರಿಗೆ ಫೋನ್ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸಾಕಷ್ಟು ಬಾರಿ ಅವರೂ ತನಗೆ ಫೋನ್ ಮಾಡಿರುವುದಾಗಿ ನುಡಿದಿರುತ್ತಾರೆ.

8. ನಾನು ಮನೆಯನ್ನು ಬಿಟ್ಟು ಎಷ್ಟು ವರ್ಷಗಳ ನಂತರ ನಾನು ನನ್ನ ಗಂಡನ ಮೇಲೆ ವಿಚ್ಛೇದನಕ್ಕೆ ಪ್ರಕರಣ ಸಲ್ಲಿಸಿದ್ದೆ ಎಂದರೆ ಒಂದುವರೆ ಯಿಂದ ಎರಡು ವರ್ಷಗಳ ಒಳಗೆ. ನಾನು ಮನೆ ಬಿಟ್ಟು ಹೋದ ದಿನದಿಂದ ಇಲ್ಲಿಯ ವರೆಗೂ ಗಟ್ಟಹಳ್ಳಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಖರೀದಿಸಿರುವ ಆಸ್ತಿಗಳಲ್ಲಿ ಇತ್ತಿಚೆಗೆ ತೆಂಗು ಮತ್ತು ಅಡಿಕೆ ಹಾಕಿಸಿದ್ದಾರೆ ಎಂದರೆ ಸರಿ. ನಾನು ಅವರಿಗೆ ಹಣವನ್ನು ಕೊಟ್ಟಿದ್ದೆನಾ ಎಂದರೆ ಸರ್ವೆ ನಂಬರ್ 88/1 ಹಾಗೂ ದಾವಾ ಷೆಡ್ಯೂಲ್ 1 ರ ಆಸ್ತಿಯಲ್ಲಿ plantation ಅನ್ನು

ಮಾಡಿಸಿದಾಗ ನಾನೇ ಇದ್ದು ಮಾಡಿಸಿದ್ದು, ನಾನು 1 ನೇ ಪ್ರತಿವಾದಿಗೆ ಹಣ ಕೊಟ್ಟಿಲ್ಲ, ನನ್ನ ಗಂಡ ಕೊಟ್ಟಿದ್ದಾರೆ. ಸರ್ವೆ ನಂಬರ್ 88/1 ರಲ್ಲಿ plantation ಮಾಡಿಸಿ 4 ವರ್ಷಗಳಾಗಿವೆ ಎಂದರೆ ಸರಿಯಲ್ಲ. ಅಲ್ಲಿ plantation ಮಾಡಿಸಿರುವುದು 2018 ರಲ್ಲಿ. ನಾನು ಆ ರೀತಿ ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಅಲ್ಲಿ ಮರಗಳು ಇನ್ನೂ ಫಸಲಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಆ ಜಮೀನಿಗೆ plantation ಮಾಡಲು 1 ನೇ ಪ್ರತಿವಾದಿಗೆ ಅವರ ಮಗ 2 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಸಂಪಾದನೆ ಮಾಡಿ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನೋಡಿಕೊಳ್ಳಲು ಯಾರೂ ಇರದೇ ಇದ್ದ ಕಾರಣ, 2 ನೇ ಪ್ರತಿವಾದಿ ಬೆಂಗಳೂರಿನಿಂದ ಕೆಲಸ ಬಿಟ್ಟು ಊರಿಗೆ ಬಂದು ಅವರನ್ನು ನೋಡಿಕೊಳ್ಳುತ್ತಿದ್ದು, ಆ ಕಾರಣಕ್ಕಾಗಿ 1 ನೇ ಪ್ರತಿವಾದಿ ಅವರ ಸ್ವಯಾರ್ಜಿತ ಆಸ್ತಿಗಳನ್ನು 2 ನೇ ಪ್ರತಿವಾದಿಗೆ ವಿಲ್ ಮಾಡಿದ್ದಾರೆ ಎಂದರೆ ಅವರು ಪ್ರಸ್ತುತ ಕೆಲಸ ಬಿಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ, ಈಗ 6 ತಿಂಗಳ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಸಾಕ್ಷಿಯು ಮುಂದುವರಿದು 2 ನೇ ಪ್ರತಿವಾದಿಯ ತಾಯಿ ಮೃತ ಪಟ್ಟಾಗ ಅವರ ಮಕ್ಕಳು ಬೆಂಗಳೂರಿನಲ್ಲಿ ಇದ್ದರು, ಆ ಸಮಯದಲ್ಲಿ ತಾನು ದೀರ್ಘ ರಜೆ ಹಾಕಿ 1 ನೇ ಪ್ರತಿವಾದಿಯನ್ನು ನೋಡಿಕೊಂಡಿರುವುದಾಗಿ ನುಡಿದಿರುತ್ತಾರೆ. ನಾನು ಯಾವತ್ತೂ ಊರಿನಲ್ಲಿ ಇರಲಿಲ್ಲ, ನನ್ನ ಗಂಡನ ಜೊತೆ ಹೊರಗಡೆ ಇದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಪಟ್ಟ ನಂತರ, ನನ್ನ ಮಾವನವರ ಯೋಗಕ್ಷೇಮ ನೋಡಿಕೊಂಡಿದ್ದ ಬಗ್ಗೆ, ಹಣ ಕೊಟ್ಟ

ಬಗ್ಗೆ ದಾಖಲೆ ಇದೆಯಾ ಎಂದರೆ, ನಾನು ಹಣ ಕೊಟ್ಟಿಲ್ಲ, ಯೋಗ ಕ್ಷೇಮ ವಿಚಾರಿಸಿಕೊಂಡಿದ್ದೇನೆ. ಸಾಕ್ಷಿಯು ಮುಂದುವರಿದು ಅವರಿಗೇ ಸಾಕಷ್ಟು ಆದಾಯ ಇದ್ದು, ಅವರ ಹೆಸರಿನಲ್ಲಿ ನಿಗಧಿತ ಠೇವಣಿ ಇದೆ ಎಂದು ನುಡಿದಿರುತ್ತಾರೆ. ನಾನು ಅವರ ಆಸ್ತಿಯನ್ನು ಪಡೆದುಕೊಳ್ಳುವುದಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಕುಟುಂಬಕ್ಕೆ ವರಮಾನ ಇದ್ದ ಬಗ್ಗೆ ದಾಖಲೆ ಕೊಟ್ಟಿದ್ದೇನಾ ಎಂದರೆ, ಜಮೀನಿನಲ್ಲಿ ಬರುವ ಆದಾಯದ ಬಗ್ಗೆ ಫೋಟೋಗಳನ್ನು ಕೊಟ್ಟಿದ್ದೇನೆ, ಅವರ ನಿಗಧಿತ ಠೇವಣಿ ಬಗ್ಗೆ ನನ್ನ ಆದಾಯ ವಿವರದಲ್ಲಿ ಇದ್ದು , ಅದನ್ನು ಪಡೆದುಕೊಳ್ಳಲು ಅರ್ಜಿ ಹಾಕಿದ್ದು, ಆ ದಾಖಲೆಯನ್ನು ಮುಂದೆ ಕೊಡುತ್ತೇನೆ. ಅವರು ವಯಸ್ಸಾದ ಮೇಲೆ ವ್ಯಾಪಾರ ಬಿಟ್ಟಿದ್ದಾರೆ ಎಂದರೆ ಅವರು ಈಗ ಯಾವುದೇ ವ್ಯಾಪಾರ ಮಾಡುತ್ತಿಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.